ನಂಬುವುದಿಲ್ಲ. 'ನಮ್ಮ ಜಮೀನಿನಲ್ಲಿ ಹೆಚ್ಚು ಇಳುವರಿ ತೆಗೆಯುವ ಕ್ರಮ ಹೇಳಿಕೊಟ್ಟು, ನಂತರ ಫಸಲಿನಲ್ಲಿ ಪಾಲು ಕೇಳಿದರೆ?', 'ಕಾಲಾಂತರದಲ್ಲಿ ನಮ್ಮ ಜಮೀನಿನ ಮೇಲೆ ಹಕ್ಕು ಪ್ರತಿಪಾದಿಸಿದರೆ?' – ಈ ಬಗೆಯ ಹಲವು ಸಂಶಯಗಳು ಹಳ್ಳಿಗರಿಗೆ ಸಹಜ. 'ಜೇನು ತೆಗೆದವರು ಕೈ ನೆಕ್ಕದೇ ಇರುತ್ತಾರೆಯೇ?' ಎನ್ನುವ ರೂಢಿಗತ ನುಡಿಗಟ್ಟನ್ನು ಸುಳ್ಳುಮಾಡಬೇಕಾದ ಅನಿವಾರ್ಯತೆ ಇದೆ ಅಲ್ಲಿ. ನಮ್ಮ ಅಹಂಕಾರವನ್ನು ಸಂಪೂರ್ಣವಾಗಿ ತ್ಯಜಿಸದೇ ಹಳ್ಳಿಗರ ನಂಬಿಕೆ ಗಳಿಸುವುದು ಸಾಧ್ಯವಿಲ್ಲ ಎನ್ನುತ್ತಾರೆ ಪ್ರಕಾಶ ಭಟ್.

'ಹಳ್ಳಿಗೆ ಹೋದಾಗ ನಿಮ್ಮ ಮೋಟಾರ್ ಬೈಕನ್ನು ಯಾವುದೋ ಒಂದು ಮನೆಯ ಎದುರು ನಿಲ್ಲಿಸಬೇಡಿ, ಬೇರೆ ಬೇರೆ ಮನೆಯ ಮುಂದೆ ನಿಲ್ಲಿಸಿ' ಎಂಬುದು ಅವರು ತಮ್ಮ ಕಾರ್ಯಕರ್ತರಿಗೆ ತಿಳಿಸುವ ಮೊದಲ ಪಾಠ. ತೀರಾ ಸರಳವಾಗಿ ಕಾಣುವ ಈ ಕ್ರಿಯೆ, ಹಳ್ಳಿಗಳ ಸಾಮಾಜಿಕ, ರಾಜಕೀಯ, ಜಾತೀಯ ಒಳಪದರಗಳ ಮೇಲೆ ಬೀರುವ ಪ್ರಭಾವ ಅಪಾರವಾದದ್ದು. ಒಂದು ನಿರ್ದಿಷ್ಟ ಮನೆಯ ಮುಂದೆ ಗಾಡಿ ನಿಲ್ಲಿಸುವುದು ಜನರಿಗೆ ಪಕ್ಷಪಾತದ ಧೋರಣೆಯಾಗಿ ಗೋಚರಿಸಬಹುದು. ಅಲ್ಲಿಂದಲೇ ಹಲವು ಸಮಸ್ಯೆಗಳು ಟಿಸಿಲೊಡೆಯಬಹುದು. ಅದರ ಬದಲಿಗೆ, 'ನಾವು ಎಲ್ಲರನ್ನೂ ಸಮಾನವಾಗಿ ಕಾಣುತ್ತೇವೆ' ಎನ್ನುವ ಸಂದೇಶವನ್ನು ಹಳ್ಳಿಗರಿಗೆ ರವಾನಿಸಲು ಈ 'ಬೈಕ್ ಪಾರ್ಕಿಂಗ್' ಸಂಗತಿಯನ್ನು ಬಳಸಿಕೊಳ್ಳಬಹುದು. ಇದು ಒಂದು ಉದಾಹರಣೆ ಮಾತ್ರ. ಹೀಗೇ, ಸಮಾನತೆಯ ಪರಿಪಾಠವನ್ನು ತಮ್ಮ ಪ್ರತಿ ಕಾರ್ಯದಲ್ಲಿಯೂ ಎಚ್ಚರಿಕೆಯಿಂದ, ಬುದ್ಧಿಪೂರ್ವಕ ಅಭ್ಯಾಸ ಮಾಡಿಕೊಳ್ಳುವುದು ಕಾರ್ಯಪಡೆಯ ಮೊದಲ ಅಗತ್ಯಗಳಲ್ಲೊಂದು.

ಬರಗಾಲ ಎದುರಿಸುವುದು ಹೇಗೆ? ಇರುವ ಜಮೀನಿನಲ್ಲಿಯೇ ಹೆಚ್ಚುವರಿ ಬೆಳೆ ಉತ್ಪಾದನೆ ಹೇಗೆ? ಇವು ಹಳ್ಳಿಗಳ/ರೈತನ ಮುಖ್ಯ ಸಮಸ್ಯೆ ಎಂಬುದು ದಿಟವಾದರೂ, ಅವಷ್ಟೇ ಅಲ್ಲ – ಸ್ವಚ್ಛ ಅಡುಗೆಮನೆಯಿಂದ ಶುರುಗೊಂಡು ಸ್ವಚ್ಛ ಗಟಾರ, ಸ್ವಚ್ಛ ಬೀದಿಗಳೂ ಸ್ವಸ್ಥ ಹಳ್ಳಿಯೊಂದರ ಪ್ರತೀಕವೆನಿಸುತ್ತದೆ. ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ಖುದ್ದು ಲೇಖಕರೇ ಕೈಯಲ್ಲಿ ಕುಟಾರೆ ಹಿಡಿದು ಗಟಾರವನ್ನು ಚೊಕ್ಕ ಮಾಡಿದ, ದನಗಳ ಮೈ ತಿಕ್ಕಿ ಹಾಲು ಹಿಂಡಿದ ಘಟನೆಗಳು ಈ ಪುಸ್ತಕದಲ್ಲಿ ದಾಖಲಾಗಿವೆ. ಅದರೊಟ್ಟಿಗೆ, ಸಣ್ಣ ಪ್ರಮಾಣದ ಬಂಡವಾಳ ಸಂಗ್ರಹ, ಆರೋಗ್ಯನಿಧಿ, ಜಲನಿಧಿಗಳ ಸ್ಥಾಪನೆಯಂತಹ ಆರ್ಥಿಕ ಸಬಲೀಕರಣಕ್ಕಾಗಿ ಅನುಸರಿಸಿದ ಕ್ರಮಗಳು ಕಾಣಸಿಗುತ್ತವೆ. ಇಷ್ಟು ಎಕರೆ ಜಾಗವಿದ್ದರೆ ಅದರಲ್ಲಿ ಹೊಲವೆಷ್ಟು, ತೋಟವೆಷ್ಟು, ಎಷ್ಟು ಮರಗಳು, ಎಲ್ಲೆಲ್ಲಿ ಕೃಷಿ ಹೊಂಡ, ಯಾವ್ಯಾವ ತಿಂಗಳಲ್ಲಿ ಏನೇನು ಕೆಲಸ ಎಂಬೆಲ್ಲ ವೈಜ್ಞಾನಿಕ ಅಧ್ಯಯನದ ಮೂಲಕ ಹೊರಹೊಮ್ಮಿದ ಕೈಪಿಡಿಯೂ ಇದೆಯಿಲ್ಲಿ.

ಸಂಘಟನೆಯ ಪ್ರಯೋಜನ ಭೌತಿಕವೂ, ಐಹಿಕವೂ ಆದರೆ ಸಾಲದು; ಅದು ಭಾವನಾತ್ಮಕವೂ ಆಗಿರಬೇಕು ಎಂಬುದು ಲೇಖಕರ ಅಭಿಪ್ರಾಯ. ಹೀಗಾಗಿಯೇ ಅವರು, ಗ್ರಾಮದ ಜನರ ಹಲ್ಲಿನ ಹೊಳಪು ಯಾವಾಗ ಮಾಸುತ್ತದೆ, ಅವರ ಭುಜಗಳು ಯಾವಾಗ ಇಳಿಯುತ್ತವೆ ಎಂಬುದನ್ನು ಸದಾ ಗಮನಿಸುತ್ತಿರುತ್ತಾರೆ. ಅವರಿಗೆ ಯಾವ ಸಮಯದಲ್ಲಿ ಯಾವ ರೀತಿಯ 'ಬೂಸ್ಟರ್ ಡೋಸ್' ಕೊಡಬೇಕು ಎಂಬುದನ್ನು ಅರಿತುಕೊಂಡಿದ್ದಾರೆ. ಇವನ್ನೆಲ್ಲ ಓದುತ್ತಿರುವಾಗ, ಶಿವರಾಮ ಕಾರಂತರ 'ಚಿಗುರಿದ ಕನಸು' ಕಾದಂಬರಿ ನೆನಪಾಗುತ್ತದೆ. ಪಟ್ಟಣವನ್ನು ತೊರೆದು ಹಳ್ಳಿಗಳ ಉದ್ಧಾರಕ್ಕಾಗಿ ಕಟಿಬದ್ಧನಾಗಿ ನಿಂತ ಕಾದಂಬರಿಯ ನಾಯಕ ಶಂಕರನ ಸಾಮ್ಯತೆ ಇಲ್ಲಿಯೂ ಅಲ್ಲಲ್ಲಿ ಕಂಡುಬಂದರೆ ಅಚ್ಚರಿಯೇನಿಲ್ಲ. ಹಾಗೇ, ಕನ್ನಡದಲ್ಲಿ ಈ ಪ್ರಕಾರದ ಕೃತಿ ಮತ್ತಾವುದಾದರೂ ಬಂದಿದೆಯೇ ಎಂದು ಅವಲೋಕಿಸಿದರೆ, ಪಿ. ಸಾಯಿನಾಥರ (ಕನ್ನಡಕ್ಕೆ ಅನುವಾದಿತ) 'ಬರ ಅಂದ್ರೆ ಎಲ್ಲರಿಗೂ ಇಷ್ಟ'ದಂತಹ ಬೆರಳೆಣಿಕೆಯಷ್ಟು ಪುಸ್ತಕಗಳ ಹೊರತು ಮತ್ತಾವುದೂ ಕಾಣಸಿಗಲಿಕ್ಕಿಲ್ಲ.

ಇದರಲ್ಲಿಯ ವಸ್ತು, ಅಧ್ಯಯನಾ ವರದಿ ಇತ್ಯಾದಿಗಳೆಲ್ಲ ಅಂಕಿಅಂಶಗಳ ಭಾರಕ್ಕೆ ಬಾಗಿ ಒಂದು ಅಕಡೆಮಿಕ್ ಪುಸ್ತಕದ ರೂಪ ಪಡೆದು ಯಾವುದಾದರೂ ಯುನಿವರ್ಸಿಟಿಯ ಕಪಾಟು ಸೇರುವ ಸಾಧ್ಯತೆಗಳಿಗೆ ಇಂಬುಗೊಡುವಂತೆಯೇ ಇದೆ. ಆದರೆ ಅದು ಹಾಗಾಗದಿರುವಲ್ಲಿ ಲೇಖಕರ ಸಾಹಿತ್ಯಿಕ ಪ್ರಜ್ಞೆ ಬಹಳವಾಗಿ ಕೆಲಸ ಮಾಡಿದೆ.